ಕೊಡುವುದರ ಬಗ್ಗೆ ಸ್ವಲ್ಪ ತೀವ್ರವಾಗಿ ಪರಿಶೀಲಿಸಿ ಸ್ವಲ್ಪ ವೇಗ ಮಾಡಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾಡಿಕೊಡಂತ್ತೇನೆ.

ಬೆಂಗಳೂರು ಟರ್ಫ್‌ಕ್ಲಬ್‌ನ್ನು ರೇಸಿಂಗ್ ಬೋರ್ಡ್ ಎಂಬ ಹೆಸರಿನಿಂದ ರಿಜಿಸ್ಟಾರ್ ಮಾಡಿಸುತ್ತಿರುವುದರ ಬಗ್ಗೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಬಹುತೇಕ ಐ.ಎ.ಎಸ್. ಅಧಿಕಾರಿಗಳಿಂದ ತುಂಬಿರುವ ಬೆಂಗಳೂರು ಟರ್ಫ್ ಕ್ಲಬ್‌ನ್ನು "ರೇಸಿಂಗ್ ಬೋರ್ಡ್" ಎಂಬ ಹೆಸರಿನಿಂದ ರಿಜಿಸ್ಟರ್ ಮಾಡಿಸುವ ಹುನ್ನಾರ ನಡೆದಿರುವುದಲ್ಲದೆ. ಕ್ರಮೇಣ ರೇಸ್ ಕೋರ್ಸನ್ನು ಹಿಂದಕ್ಕೆ ಪಡೆದು ಕೆಲವು ಸ್ಥಳವನ್ನು ಮಾರಾಟ ಮಾಡಲಾಗುವುದೆಂಬುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೀರಣ್ಣ (ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೆ, ಈ ಹೇಳಿಕೆ ಮಾಡುತ್ತೇನೆ.

ಕರ್ನಾಟಕದಲ್ಲಿ, ಸಾರ್ವಜನಿಕ ಹಿತಾಸಕ್ತಿಯಿಂದ ರೇಸ್‌ಗಳನ್ನು ಯೋಗ್ಯವಾಗಿ ಹಾಗೂ ಕ್ರಮಬದ್ಧವಾಗಿ ನಡೆಸುವ ಸಲುವಾಗಿ ಕೆಲವು ಕ್ರಮಗಳನ್ನು ತೆಗೆದುಕೊಳ್ಳುವುದು ಸರ್ಕಾರಕ್ಕೆ ಅವಶ್ಯಕವೆನಿಸಿತು. ಸರ್ಕಾರಕ್ಕೆ ರಾಜಸ್ವ ಬರುವುದನ್ನು ರಕ್ಷಿಸುವುದರ ಜೊತೆಗೆ ರೇಸನ್ನು ಒಂದು ಕ್ರೀಡೆ ಎಂದು ಪರಿಗಣಿಸಿ, ಇದರ ಬಗ್ಗೆ ಸಾರ್ವಜನಿಕ ಆಸಕ್ತಿ ಉಳಿಯುವಂತೆ ಮಾಡುವ ಅನೇಕ ಕ್ರಮಗಳ ಭಾಗವಾಗಿ, ಕರ್ನಾಟಕದಲ್ಲಿ ರೇಸಿಗೆ ಸಂಬಂಧಿಸಿದಂತೆ ಎಲ್ಲಾ ಅಂಶಗಳನ್ನು ಪರಿಶೀಲಿಸಲು ಕರ್ನಾಟಕ ರೇಸಿಂಗ್ ಆಯೋಗವನ್ನು ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ ೪೬ ಸಿಆರ್‌ಸಿ ೮೫ ದಿನಾಂಕ ೨೩-೫-೧೯೮೬ರಲ್ಲಿ ನೇಮಕ ಮಾಡಲಾಯಿತು. ಆಯೋಗವು ಸರ್ಕಾರಕ್ಕೆ ೨೯ನೇ ಏಪ್ರಿಲ್ ೧೯೮೭ರಂದು ತನ್ನ ವರದಿಯನ್ನು ಸಲ್ಲಿಸಿರುತ್ತದೆ.

೨. ಕರ್ನಾಟಕ ರೇಸಿಂಗ್ ಆಯೋಗವು ಮಾಡಿದ ಶಿಫಾರಸ್ಸುಗಳಲ್ಲಿ "ಕರ್ನಾಟಕ ಸ್ಟೇಟ್ ರೇಸಿಂಗ್ ಬೋರ್ಡ್" ಎಂಬ ಸಂಸ್ಥೆಯನ್ನು ಸ್ಥಾಪಿಸಿ, ರೇಸಿಂಗ್ ನಡೆಸುವ ಪೂರ್ಣ ಜವಾಬ್ದಾರಿಯನ್ನು ಅದಕ್ಕೆ ವಹಿಸಿಕೊಡಬೇಕೆಂಬುದು ಒಂದಾಗಿದೆ. ಈ ಆಯೋಗವು ಮಾಡಿದ ಈ ಶಿಫಾರಸ್ಸುಗಳು ಸರ್ಕಾರದ ಪರಿಶೀಲನೆಯಲ್ಲಿದೆ. ಬಹುತೇಕ ಐ.ಎ.ಎಸ್. ಅಧಿಕಾರಿಗಳಿಂದ ತುಂಬಿದ ಸಂಸ್ಥೆಯೇ "ರೇಸಿಂಗ್ ಬೋರ್ಡ್" ಎಂಬ ಹೆಸರಿನಿಂದ ರಿಜಿಸ್ಟರ್ ಮಾಡಿಸುವ ಹುನ್ನಾರ ಒಂದು ನಡೆದಿದೆ ಎನ್ನುವುದು ಸತ್ಯಕ್ಕೆ ದೂರವಾಗಿದೆ. ಇದರಲ್ಲಿ ಅಖಿಲ ಭಾರತ ಸೇವಾ ಅಧಿಕಾರಿಗಳ ಒಳಸಂಚೇನಿಲ್ಲ ವೆಂಬುದು ಸ್ಪಷ್ಟವಾಗಿದೆ.

೩. "ಕರ್ನಾಟಕ ಸ್ಟೇಟ್ ರೇಸಿಂಗ್ ಬೋರ್ಡ್" ಸ್ಥಾಪನೆಗೆ ಪೂರ್ವಭಾವಿ ಕ್ರಮತೆಗೆದುಕೊಳ್ಳುವ ದಿಸೆಯಲ್ಲಿ, ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್ ಇವರಿಗೆ ೪-೩-೧೯೮೮ರಲ್ಲಿ, ಕ್ಲಬ್‌ಗೆ ಸರ್ಕಾರವು ಗುತ್ತಿಗೆ ಮೇಲೆ ಕೊಟ್ಟಿರತಕ್ಕಂಥ ಹಾಲಿ ರೇಸ್ ನಡೆಯುತ್ತಿರುವ ರೇಸ್ ಕೋರ್ಸ್ ಹಾಗೂ ಅದಕ್ಕೆ ಸಂಬಂಧಿಸಿದಂತೆ ಇರುವ ಕಟ್ಟಡಗಳನ್ನು ೩೦-೪-೧೯೮೮ರೊಳಗೆ ಸರ್ಕಾರದ ವಶಕ್ಕೆ ಕೊಡಬೇಕೆಂಬ ನೋಟೀಸ್ ಕೊಡಲಾಯಿತು. ಈ ನೋಟಿಸ್ ಅವಧಿಯನ್ನು ವಿಸ್ತರಿಸಿ ಮೇಲ್ಕಂಡ ಸ್ವತ್ತನ್ನು ೩೧-೮-೧೯೮೮ ರೊಳಗಾಗಿ ಸರ್ಕಾರದ ವಶಕ್ಕೆ ಹಿಂದಿರುಗಿಸಬೇಕೆಂದು ತಿಳಿಸಲಾಗಿದೆ.

೪. ಬೆಂಗಳೂರು ರೇಸ್ ಕೋರ್ಸ್‌ನ್ನು ಜಕ್ಕೂರಿಗೆ ಸ್ಥಳಾಂತರಿಸುವುದು, ಮತ್ತು ರೇಸ್ ಕೋರ್ಸ್ ವೈದಾನವನ್ನು ಮಕ್ಕಳ ಉದ್ಯಾನವನವನ್ನಾಗಿ ಅಭಿವೃದ್ಧಿಪಡಿಸುವ ಬಗ್ಗೆ ಸರ್ಕಾರವು ಈಗಾಗಲೇ ತೀರ್ಮಾನಿಸಿದೆ. ಆದ್ದರಿಂದ ರೇಸ್‌ಕೋರ್ಸ್ ಸ್ಥಳವನ್ನು ಹಿಂದಕ್ಕೆ ಪಡೆದು ಕೆಲವು ಸ್ಥಳವನ್ನು ಮಾರಾಟ ಮಾಡಲಾಗುವುದೆಂಬ ಪದಂತಿ ಸತ್ಯಕ್ಕೆ ದೂರವಾಗಿದೆ. ಬೆಂಗಳೂರು ರೇಸ್ ಕೋರ್ಸ್‌ನ್ನು ಜಕ್ಕೂರಿಗೆ ಸ್ಥಳಾಂತರಿಸುವ ಬಗ್ಗೆ ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕರ್ನಾಟಕದಲ್ಲಿ ರೇಸಿಂಗ್ ಬೋರ್ಡ್ ಮಾಡುತ್ತೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಆದರಲ್ಲಿ ಇರತಕ್ಕ ಪದಾಧಿಕಾರಿಗಳು ಯಾರು ? ಸರ್ಕಾರಿ ಅಧಿಕಾರಿಗಳ ನಾಮಕರಣ ಎಷ್ಟಿದೆ ? ಹಾಗೂ ಆದರ ಸ್ವರೂಪ ಏನು ಇದರ ಬಗ್ಗೆ ವಿವರವಾದ ಮಾಹಿತಿ ಹೇಳಿಲ್ಲ. ಐ.ಎ.ಎಸ್. ಅಧಿಕಾರಿಗಳ ಒಳಸಂಚು ನಡೆದಿಲ್ಲವೆಂದು ಹೇಳಿದ್ದಾರೆ. ಐ.ಎ.ಎಸ್. ಅಧಿಕಾರಿಗಳನ್ನು ಬೋರ್ಡ್‌ನಲ್ಲಿ ಇಡುತ್ತೀರೊ ಹೇಗೆ ? ಐ.ಎ.ಎಸ್. ಅಧಿಕಾರಿಗಳಿಂದಲೆ ಬೋರ್ಡ್ ನಡೆಯುತ್ತಿದೆ ಎನ್ನುವ ಅನುಮಾನ ನನಗೆ ಇದೆ. ಮಕ್ಕಳ ಉದ್ಯಾನವನ ಮಾಡುತ್ತೇವೆಂದು ಹೇಳಿ ಆ ಜಮೀನನ್ನು ಖಾಸಗಿಯವರಿಗೆ ಪರ್ಗಾವಣೆ ಮಾಡತಕ್ಕಂಥ ವ್ಯವಹಾರ ಕೂಡ ನಡೆಯುತ್ತಿದೆ ಎಂದು ತಿಳಿದುಬಂದಿದೆ. ಇದರ ಸಂಪೂರ್ಣ ಹಕ್ಕು ಯಾರಿಗೆ ಸೇರಿರುತ್ತದೆ ಬೋರ್ಡ್‌ಗೆ ಇರುತ್ತದೊ ಅಥವಾ ಸರ್ಕಾರಕ್ಕೆ ಇರುತ್ತದೋ ನೇರವಾಗಿ ಉತ್ತರವನ್ನು ಹೇಳಬೇಕು.

ಶ್ರೀ ವೀರಣ್ಣ — ಮಾನ್ಯ ಅಧ್ಯಕ್ಷರೆ, ಕಮಿಷನ್‌ನವರು ರಿಪೋರ್ಟ್‌ನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆ ರಿಪೋರ್ಟ್‌ನಲ್ಲಿ ಅನೇಕ ಶಿಫಾರಸುಗಳನ್ನು ಕೊಟ್ಟಿದ್ದಾರೆ. ಇವುಗಳಲ್ಲಿ ರೇಸಿಂಗ್ ಬೋರ್ಡ್ ಮಾಡಬೇಕೆನ್ನುವುದು ಒಂದು. ಈ ವಿಚಾರದಲ್ಲಿ ಸರ್ಕಾರ ತೀರ್ಮಾನ ಮಾಡಿಲ್ಲವೆಂದು ಉತ್ತರದಲ್ಲಿ ಹೇಳಿದ್ದೇನೆ. ಈ ರೇಸಿಂಗ್ ಬೋರ್ಡ್‌ನಲ್ಲಿ ಐ.ಎ.ಎಸ್. ಅಧಿಕಾರಿಗಳು ಇರುತ್ತಾರೆನ್ನುವುದು ಸತ್ಯಕ್ಕೆ ದೂರವಾದ ವಿಚಾರ. ಖಾಸಗಿಯವರಿಗೆ ಈ ಜಮೀನನ್ನು ಮಾರತಕ್ಕ ಪ್ರಶ್ನೆಯೇ ಇಲ್ಲ. ಮಕ್ಕಳ ಉದ್ಯಾನವನವನ್ನಾಗಿ ಮಾಡುತ್ತೇವೆ. ರೇಸ್‌ಕೋರ್ಸ್‌ನ್ನು ಜಕ್ಕೂರಿಗೆ ಸ್ಥಳಾಂತರಿಸುತ್ತೇವೆ ಎನ್ನುವ ಖಚಿತ ಭರವಸೆಯನ್ನು ಕೊಡುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ —ಮಾನ್ಯ ಅಧ್ಯಕ್ಷರೆ, ಸರ್ಕಾರದವರು ರೇಸ್‌ಕೋರ್ಸ್‌ಗೆ ಬದಲಿ ಜಾಗವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಅದನ್ನು ನಿಲ್ಲಿಸತಕ್ಕ ಕಾರ್ಯಕ್ರಮವನ್ನು ಏತಕ್ಕೆ ತೆಗೆದುಕೊಳ್ಳಬಾರದು ? ಇದರಿಂದ ಸರ್ವೇ ಸಾಮಾನ್ಯವಾಗಿ ಬಡ ಕುಟುಂಬಗಳು ಹಾಳಾಗಿ ಹೋಗಿವೆ. ಸರ್ಕಾರಕ್ಕೆ ಇದರಿಂದ ಎಷ್ಟು ತೆರಿಗೆ ಬರುತ್ತದೆ. ಸಂಪೂರ್ಣವಾಗಿ ರೇಸ್‌ಅನ್ನು ನಿಲ್ಲಿಸುವ ವಿಚಾರದಲ್ಲಿ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಉದ್ಯಾನವನಕ್ಕೆ ಸಂಬಂಧಪಟ್ಟಂತೆ ಪ್ರಾಜೆಕ್ಟ್ ರಿಪೋರ್ಟ್ ತಯಾರಾಗಿದೆಯೇ ? ಕಮಿಷನ್‌ನವರು ಏನು ವರದಿಯನ್ನು ಕೊಟ್ಟಿದ್ದಾರೆ ಆ ವರದಿಯ ಪ್ರತಿಯನ್ನು ಸದನಕ್ಕೆ ಕೊಡುತ್ತೀರಾ ? ಇದು ಕ್ಯಾಬಿನೆಟ್ ಮುಂದೆ ಬಂದಿದೆಯೋ ಇಲ್ಲವೋ ತಿಳಿಸಿ. ಜಾಗ ಕೈಗೆ ಬರದೆ ಬೇರೆ ಕಡೆ ಕೊಡುವುದಕ್ಕೆ ಏತಕ್ಕೆ ಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ವೀರಣ್ಣ —ಅಧ್ಯಕ್ಷರೆ, ಉತ್ತರದಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ೩೦-೪-೧೯೮೮ ರೊಳಗೆ ಎಲ್ಲಾ ಜಾಗವನ್ನು ಮತ್ತು ಕಟ್ಟಡವನ್ನು ಸರ್ಕಾರದ ವಶಕ್ಕೆ ಬಿಟ್ಟು ಕೊಡಬೇಕೆಂದು ನೋಟೀಸ್ ಕೊಡಲಾಗಿದೆ. ಅಂತಿಮ ನೋಟೀಸನ್ನು ೩೧-೮-೧೯೮೮ರೊಳಗೆ ಹಿಂದುರುಗಿಸಬೇಕೆಂದು ತಿಳಿಸಲಾಗಿದೆ. ಸರ್ಕಾರ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ರೇಸಿಂಗ್ ಬೋರ್ಡ್ ಮಾಡಬೇಕೆಂದು ಸಲಹೆ ಕೊಟ್ಟಿದ್ದಾರೆ. ರೇಸ್ ತೆಗೆದುಹಾಕುವ ಪ್ರಶ್ನೆ ಇಲ್ಲ. ಪಂಚಮುಖಿ ಮಂತ್ರಿಗಳು ಈ ವಿಚಾರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ರೇಸ್‌ಅನ್ನು ಸ್ಥಳಾಂತರ ಮಾಡುತ್ತೇವೆ. ಸರ್ಕಾರಕ್ಕೆ ಇದರಿಂದ ಬರತಕ್ಕ ತೆರಿಗೆ ಈ ರೀತಿ ಇದೆ. ಕಳೆದ ಮೂರು ವರ್ಷದಲ್ಲಿ ಅಂದರೆ ೧೯೮೫-೮೬ರಲ್ಲಿ ಒಟ್ಟು ೫,೨೫,೮೫,೩೬೪ ಕೋಟಿ ರೂಪಾಯಿಗಳು. ೧೯೮೬-೮೭ರಲ್ಲಿ ೫,೩೭,೭೭,೦೦೦ ಕೋಟಿ ರೂಪಾಯಿಗಳು, ೧೯೮೭-೮೮ ರಲ್ಲಿ ೭,೮೫,೯೮,೦೭೯ ಕೋಟಿ ರೂಪಾಯಿಗಳು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಐದು ಕೋಟಿ ರೂಪಾಯಿಗಳು ಬರುತ್ತಿದೆ ಎಂದು ಹೇಳುತ್ತಿದ್ದೀರಿ. ಆದರೆ ಸರ್ಕಾರದ ವತಿಯಿಂದ ರೇಸಿಂಗ್ ಬೋರ್ಡ್ ಮಾಡಿದರೆ ಹೇಗೆ ? ಇದನ್ನು ತಡೆಹಿಡಿಯುವುದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಿ.

೬-೦೦ ಪಿ.ಎಂ.

ಸನ್ಮಾನ್ಯ ಉಪಾಧ್ಯಕ್ಷರೆ, ಈ ರೇಸ್ ನಿಲ್ಲಿಸುವ ಬಗ್ಗೆ ತಾವು ಸಹ ಒಪ್ಪುವಿರಾ ಎಂದು ಭಾವಿಸುತ್ತೇನೆ. ಈಗ ಮಾನ್ಯ ಮಂತ್ರಿಗಳು ೫ ಕೋಟಿ ರೂಪಾಯಿಗಳು ಉತ್ಪಾದನೆ ಒರುತ್ತಿದೆ ಎನ್ನುವ ವಿಚಾರವನ್ನು ತಿಳಿಸಿದರು. ಸರ್ಕಾರದಿಂದ ಆಗತಕ್ಕ ವಿಚ್ರ್ಯು ಎಷ್ಟು ಬೋರ್ಡ್‌ನವರು ರೆಕಮೆಂಡ್ ಮಾಡಿರತಕ್ಕದ್ದು ಪೂರ್ತಿ ಈ ಸದನದ ಮುಂದೆ ಇಡಲಿಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ವೀರಣ್ಣ.—ಸರ್ಕಾರಕ್ಕೆ ರಿಪೋರ್ಟ್ ಬಂದಿದೆ, ಅದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಸರ್ಕಾರ ಮಾಡುತ್ತಿದೆ. ಎಲ್ಲಾ ಅಂಶಗಳನ್ನು ಒಪ್ಪಿಕೊಳ್ಳಬೇಕೆ ? ಅಥವಾ ಬೇಡವೆ ? ಕೆಲವೇ ಅಂಶಗಳನ್ನು ಒಪ್ಪಿಕೊಳ್ಳಬೇಕೆ ? ಎನ್ನುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಅದರ ಬಗ್ಗೆ ತೀರ್ಮಾನ ತೆಗೆದುಕೊಂಡಾಗ ಮಾನ್ಯ ಸದಸ್ಯರಿಗೂ ಗೊತ್ತಾಗುತ್ತದೆ. ಅದು ಕರ್ನಾಟಕ ರಾಜ್ಯದ ಜನತೆಗೂ ಕೂಡ ಗೊತ್ತಾಗುತ್ತದೆ. ಅಧ್ಯಕ್ಷರೆ, ಈ ವಿಚಾರದಲ್ಲಿ ನಾನು ಇಷ್ಟು ಮಾತ್ರ ಹೇಳಲಿಕ್ಕೆ ಇಷ್ಟಪಡುತ್ತೇನೆ.

೪. ತುಮಕೂರು ತಾಲ್ಲೂಕು ನಾಗವಲ್ಲಿಯಲ್ಲಿ ಶ್ರೀಮತಿ ಗಿರಿಜ ಅವರ ಸಂಶಯಾಸ್ಪದ ಮರಣದ ಬಗ್ಗೆ

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯ್ಕನಹಳ್ಳಿ).—ಅಧ್ಯಕ್ಷರೆ, ತುಮಕೂರು ತಾಲ್ಲೂಕು ನಾಗವಲ್ಲಿಯ ಶ್ರೀ ಎನ್. ಡಿ. ಪಾಲಾಕ್ಷಯ್ಯನವರ ಮಗ ಕುಣಿಗಲ್ ಸಿದ್ಧಾರ್ಥ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿರುವ ಶ್ರೀ ಎನ್. ಪಿ. ಜಗದೀಶ್ ಅವರೊಡನೆ ದಿನಾಂಕ ೧೨-೫-೧೯೮೮ರಂದು ಶ್ರೀಮತಿ ಗಿರಿಜಮ್ಮನ ವಿವಾಹವಾಗಿತ್ತು. ನಂತರ ೧೭-೫-೧೯೮೮ರಂದೇ ನಾಗವಲ್ಲಿಯ ತನ್ನ ಪತಿಯ ಮನೆಯಲ್ಲಿ ಸಂಶಯಾಸ್ಪದ ರೀತಿಯಲ್ಲಿ ಸಾವಿಗೀಡಾದ ಪದವೀಧರೆ ಶ್ರೀಮತಿ ಗಿರಿಜ ಅವರ ಸಾವಿನ ಬಗ್ಗೆ ಗಿರಿಜಳ ಅಣ್ಣ ತುಮಕೂರು ಜಿಲ್ಲಾ ಪೋಲೀಸರು ಸೂಪರಿಂಟೆಂಡೆಂಟ್‌ರವರಿಗೇ ದೂರು ಕೊಟ್ಟಾಗ್ಯೂ ಸದರಿ ದೂರಿನ ಬಗ್ಗೆ ಯಾವುದೇ ಕ್ರಮವನ್ನೂ ತೆಗೆದುಕೊಳ್ಳದೆ ಪೋಲೀಸರು ಶವಪರೀಕ್ಷೆಗೆ ಮುನ್ನ ಬಂಧುಗಳಿಗೆ ಮೃತ ಗಿರಿಜಳ ಮುಖವನ್ನೂ ತೋರಿಸದೆ ಮೃತಳ ಬಂಧುಗಳನ್ನು ಬೆದರಿಸಿ ಕಳುಹಿಸಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೀರಣ್ಣ (ಮುಖ್ಯ ಮಂತ್ರಿಗಳ ಪರವಾಗಿ).—ಅಧ್ಯಕ್ಷರೆ, ನಾಗವಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾ ಶ್ರೀ ಜಗದೀಶ್ ಎಂಬುವರ ಪತ್ನಿ ವಿಷ ಸೇವಿಸಿದ್ದಾರೆಂದು ಹೇಳಲಾದ ಶ್ರೀಮತಿ ಗಿರಿಜಮ್ಮ (೨೬ ವರ್ಷ) ರವರನ್ನು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೊರ ರೋಗಿಯಾಗಿ ಸೇರಿಸಿಕೊಳ್ಳಲಾಯಿತೆಂದೂ, ಸೇರಿಸಿಕೊಳ್ಳುವಾಗಲೇ ಆಕೆಯ ಸ್ಥಿತಿ ಚಿಂತಾಜನಕವಾಗಿತ್ತೆಂದೂ, ಆದರೂ ಆಕೆಗೆ ಚಿಕಿತ್ಸೆ ನೀಡಲಾಗಿ ಗುಣಮುಖರಾಗದೆ ರಾತ್ರಿ ೭.೧೫ರ ಸಮಯದಲ್ಲಿ ಮೃತಳಾದಳೆಂದು ದಿನಾಂಕ ೧೭-೫-೧೯೮೮ರ ರಾತ್ರಿ ೯-೪೫ ಘಂಟೆಯಲ್ಲಿ ತುಮಕೂರು ತಾಲ್ಲೂಕಿನ ಹೆಬ್ಬೂರು ಪೋಲೀಸ್ ಠಾಣೆಗೆ ವರದಿಯನ್ನು ಕೊಟ್ಟರು ಇದನ್ನು ಅಸ್ವಾಭಾವಿಕ ಮರಣದ ಪ್ರಕರಣವೆಂದು ದಾಖಲು ಮಾಡಿಕೊಂಡು ವಿಚಾರಣೆ ಮಾಡಲಾಯಿತು.

೨. ಪೋಲೀಸರ ಕೋರಿಕೆ ಮೇರೆಗೆ ತಾಲ್ಲೂಕು ಮ್ಯಾಜಿಸ್ಟ್ರೇಟ್‌ರವರು ದಿನಾಂಕ ೧೮-೫-೧೯೮೮ರ ಮಧ್ಯಾಹ್ನ ೩.೪೫ ಘಂಟೆಯಿಂದ ಸಂಜೆ ೭ ೪೫ ಘಂಟೆಯವರೆಗೆ ಶವದ ಮಹಜರ್ ನಡೆಸಿದರು. ಮಹಜರಿನ ವೇಳೆಯಲ್ಲಿ ಮೃತಳ ಅಣ್ಣ ಶ್ರೀ ಜೆ. ಎಸ್. ಬಸವರಾಜ್, ತಾಯಿ ಶ್ರೀಮತಿ ರೇವಮ್ಮ ತಂದೆ ಶ್ರೀ ಸಿದ್ದಣ್ಣ ಇವರಂಗಳನ್ನು ವಿಚಾರಿಸಲಾಯಿತು. ಶ್ರೀಮತಿ ರೇವಮ್ಮನವರು ತಮ್ಮ ಹೇಳಿಕೆಯಲ್ಲಿ ಮೃತಳು ಆತ್ಮಹತ್ಯೆ ಮಾಡಿಕೊಂಡಿರಲಾರಳು ಎಂದು ತಿಳಿಸಿದ್ದಾರೆ. ಮೃತಳ ತಂದೆ ಸಾವಿಗೆ ಕಾರಣವೇನೆಂದು ಗೊತ್ತಿಲ್ಲವೆಂದು ಹೇಳಿಕೆ ಕೊಟ್ಟರು ಮೃತಳ ಅಣ್ಣ ಏನನ್ನೂ ಹೇಳಿಲ್ಲ. ಈ ಪ್ರಕರಣದಲ್ಲಿ ವರದಕ್ಷಿಣೆಯ ಬಗ್ಗೆ ಕಿರುಕುಳ ಅಥವಾ ಇತರೆ ಕಿರುಕುಳದ ಬಗ್ಗೆ ಯಾವ ದೂರುಗಳೂ ಬಂದಿರುವುದಿಲ್ಲ.

೩. ಗಿರಿಜಮ್ಮನ ದೇಹದ ಮರಣೋತ್ತರ ಪರೀಕ್ಷೆಯನ್ನು ತುಮಕೂರು ಸರ್ಕಾರಿ ಆಸ್ಪತ್ರೆಯ ಇಬ್ಬರು ವೈದ್ಯರಿಂದ ನಡೆಸಿದರು. ಮರಣೋತ್ತರ ಪರೀಕ್ಷಾ ವರದಿ ಮತ್ತು ಮಹಜರ್‌ಗಳಿಂದ ಆಕೆಯ ದೇಹದ ಮೇಲೆ ಯಾವ ತರಹದ ಗಾಯಗಳಾಗಿರುವುದು ಕಂಡು ಬಂದಿಲ್ಲ. ಮರಣಕ್ಕೆ ಕಾರಣ ತಿಳಿಯಲು ರಾಸಾಯನಿಕ ತಜ್ಞರ ವರದಿ ಬರಬೇಕಾಗಿದೆ

೪. ತುರುವೇಕೆರೆಯ ಸಿದ್ದಪ್ಪನವರ ಮಗಳಾದ ಶ್ರೀಮತಿ ಗಿರಿಜಮ್ಮ ಪದವೀಧರೆಯಾಗಿದ್ದು, ಆಕೆಗೆ ಕುಣಿಗಲ್‌ನ ಸಿದ್ಧಾರ್ಥ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿರುವ ಜಗದೀಶ್‌ರವರೊಡನೆ ದಿನಾಂಕ ೧೨-೫-೧೯೮೮ರಂದು ಮದುವೆಯಾಗಿತ್ತು. ದಿನಾಂಕ ೧೩-೫-೧೯೮೮ರಂದು ಆರತಕ್ಷತೆ ಇತ್ತು.